ಮಾಡುತ್ತಿದ್ದವು. ಮಂತ್ರಿಗಳ ಊಟದ ಸನ್ನಿವೇಶ ಲೈವ್ ಆಗಿ ಹೋಗುತ್ತಿದ್ದರಿಂದ ಎಲ್ಲರೂ ಗಂಭೀರವಾಗಿದ್ದರು. ಅಲ್ಲಿಂದ ಸಾವಕ್ಕಳನ್ನು ಬದಿಗೆ ಕರೆದ ಮರಿಬಸಪ್ಪನವರು, "ಸಾವಕ್ಕ ನಿನ್ನ ಕೆಲಸ ಆತು. ಇವತ್ತ ಒಂದ್ ದಿನಾ ನೀನು ಬಾಜು ಮನ್ಯಾಗ್ ಮಲಕೋಬೆ" ಎಂದು ಹೇಳಿ ಒಳ ಹೋದರು. ಸಾವಕ್ಕ ಅಂದುಕೊಂಡಂತೆ ಯಾವುದೂ ನಡೆಯಲಿಲ್ಲ. ತಾನು ಪ್ರೀತಿಯಿಂದ ಮಾಡಿದ ಅಡುಗೆಯನ್ನು ತನ್ನ ಮಗ ಪ್ರಕಾಶಿಗೆ ಬಡಿಸಿದಂತೆ ಮಂತ್ರಿಗಳಿಗೂ ಉಣಬಡಿಸಬೇಕೆದುಕೊಂಡಿದ್ದ ಸಾವಕ್ಕಳಿಗೆ ದುಃಖದಿಂದ ಎದೆಯುಬ್ಬಿ ಬಂತು. ತನ್ನ ಹರಿದ ಕೌದಿಯನ್ನೆತ್ತಿಕೊಂಡು ಭೀಮವ್ವನ ಮನೆಯ ಕಡೆಗೆ ಅಂದಿನ ರಾತ್ರಿಯ ವಸ್ತಿಗಾಗಿ ನಡೆದಳು.

ಮರುದಿನ ಬೆಳಗಿನ ಕರ್ಮಗಳನ್ನು ಮುಗಿಸಿದ ಮಂತ್ರಿಗಳು ಸ್ವಲ್ಪ ಹೊತ್ತು ಅಂದಿನ ಪತ್ರಿಕೆಗಳಲ್ಲಿ ಕಣ್ಣಾಡಿಸಿ ತಮ್ಮ ಗ್ರಾಮ ವಾಸ್ತವ್ಯದ ಸುದ್ದಿಯನ್ನು ಓದಿದರು. ಪಂಚಾಯ್ತಿ ಅಧ್ಯಕ್ಷರು ಎಷ್ಟೇ ಒತ್ತಾಯ ಮಾಡಿದರೂ ಬೆಳಗಿನ ತಿಂಡಿಗೆ ನಿಲ್ಲಲಿಲ್ಲ. ಬೆಂಗಳೂರಿನಲ್ಲಿ ಪಾರ್ಟಿ ಮೀಟಿಂಗ್ ಅಟೆಂಡ್ ಮಾಡಬೇಕಿದೆ ಎಂದು ಹೊರಡಲನುವಾದರು. ರಾತ್ರಿ ಕಣ್ಣಿಗೆ ಕಣ್ಣು ಹತ್ತದೇ ಬೆಳಗಿನ ಜಾವ ಸಾವಕ್ಕಳಿಗೆ ಜೊಂಪು ಹತ್ತಿತ್ತು. ಭೀಮವ್ವ ಸಾವಕ್ಕಳನ್ನು ಎಬ್ಬಿಸುತ್ತ, "ಮಂತ್ರಿಗೋಳ್ ಹೊಂಟಾರಂತ ಏಳಬೇ" ಎಂದಾಗ ಸಾವಕ್ಕ ಗಡಬಡಿಸಿ ಎದ್ದು ಮನೆಯತ್ತ ಓಡಿದ್ದಳು. ಮಂತ್ರಿಗಳು ಆಗಲೇ ಮನೆಯಿಂದ ಹೊರ ಬಂದಿದ್ದರು. ಧಾವಿಸಿ ಬಂದ ಸಾವಕ್ಕ ಟ್ರಂಕಿನಲ್ಲಿ ಇಟ್ಟಿದ್ದ ಅರ್ಜಿ ಪತ್ರವನ್ನು ತೆಗೆದುಕೊಂಡು ಹೊರಬಂದಳು. ಮಂತ್ರಿಗಳು ಕಾರನ್ನು ಸಮೀಪಿಸಿ ನೆರೆದಿದ್ದ ಜನಸ್ತೋಮಕ್ಕೊಮ್ಮೆ ನಮಸ್ಕರಿಸಿ ಕೈ ಬೀಸಿದರು. ಗುಂಪುಗೂಡಿದ್ದ ಜನರ ಮಧ್ಯದಿಂದ ಜಾಗ ಮಾಡಿಕೊಂಡು ಸಾವಕ್ಕ ಮಂತ್ರಿಗಳ ಹತ್ತಿರ ಹೋಗಬೇಕೆನ್ನುವಷ್ಟರಲ್ಲಿ ಕ್ಯಾಮರಾಮನ್ ಒಬ್ಬ, "ಅಮ್ಮ ತಾಳಿ" ಎಂದು ಸಾವಕ್ಕನಿಗೆ ಕೈ ಅಡ್ಡ ಹಾಕಿ ಮಂತ್ರಿಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಿದ್ದ. ಮಂತ್ರಿಗಳು ಕಾರಿನಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಪಂಚಾಯ್ತಿ ಅಧ್ಯಕ್ಷರು ಬಾಗಿಲನ್ನು ಮುಚ್ಚಿ ಕೈ ಮುಗಿದರು. ಕ್ಯಾಮೆರಾಮನ್ ತಾನು ಸಾವಕ್ಕನಿಗೆ ಅಡ್ಡವಾಗಿ ಹಿಡಿದಿದ್ದ ಕೈಯ್ಯನ್ನು ತೆಗೆದು ಚಲಿಸುತ್ತಿದ್ದ ಕಾರಿನ ಹಿಂದೆ ಓಡುತ್ತ ಕಾರನ್ನು ಕ್ಯಾಪ್ಚರ್ ಮಾಡುತ್ತ ಹೋದ. ಸಾವಕ್ಕನ ಕೈಯ್ಯಲ್ಲಿದ್ದ ಕಾಗದವು ಆಕೆಯ ಕೈ ಹಿಡಿತ ತಪ್ಪಿ ಕೆಳಗೆ ಬಿದ್ದಿತು. ಅಷ್ಟರಲ್ಲಿ ಜೋರಾಗಿ ಬೀಸಿದ ಗಾಳಿಗೆ ಅರ್ಜಿ ಕಾಗದ ದಿಕ್ಕು ದೆಸೆಯಿಲ್ಲದೇ ಹಾರಾಡತೊಡಗಿತು. ಇನ್ನೂ ಜೋರಾಗಿ ಗಾಳಿ ಬೀಸತೊಡಗಿದಾಗ ಅದು ಮಂತ್ರಿಗಳ ಕಾರಿನ ಹಿಂದೆ ಹಿಂದೆಯೇ ಹೋಗಿ ಅವರನ್ನೇ ಹಿಂಬಾಲಿಸುತ್ತಿತ್ತು.


## ಗೌರಿ ಚಂದ್ರಕೇಸರಿ

ಹುಟ್ಟಿ ಬೆಳೆದದ್ದು ಧಾರವಾಡದಲ್ಲಿ. ಪ್ರಸ್ತುತ ಶಿವಮೊಗ್ಗದಲ್ಲಿ ವಾಸ. ಕರ್ನಾಟಕ ವಿಶ್ವವಿದ್ಯಾಲಯದಿಂದ ಸಮಾಜಕಾರ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹತ್ತು ವರ್ಷಗಳ ಕಾಲ ಆಪ್ತ ಸಮಾಲೋಚಕರಾಗಿ ಶಿವಮೊಗ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಕೆಲಸಮಾಡಿ, ಪ್ರಸ್ತುತ ಸ್ವಂತ ಉದ್ಯೋಗದಲ್ಲಿ ತೊಡಗಿದ್ದಾರೆ.

ಪತ್ರಿಕೆಗಳಲ್ಲಿ ಲೇಖನ ಹಾಗೂ ಕತೆಗಳು ಪ್ರಕಟವಾಗಿವೆ. 'ಪ್ರಜಾವಾಣಿ' ಪತ್ರಿಕೆಯ ಸಂಕ್ರಾಂತಿ ಪ್ರಬಂಧ ಸ್ಪರ್ಧೆಯಲ್ಲಿ ಮೆಚ್ಚುಗೆ ಬಹುಮಾನ, 'ಸುಧಾ' ವಾರ ಪತ್ರಿಕೆಯ ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಬಂದಿವೆ.